ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಭಾರತೀಯ ಜನಗಣತಿ ಯೋಜನೆಡಿಯಲ್ಲಿರುವ ಆಸ್ಪತ್ರೆಗಳು

೬೧೮. ಶ್ರೀ ಕೆ. ಬಿ. ಕೊಳಿವಾಡ್ (ರಾಣೆಬೆನ್ನೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಉತ್ತರಿಸುವರೆ ?

(ಅ) ಭಾರತ ಜನಸಂಖ್ಯಾ ಯೋಜನೆ ಅಡಿಯಲ್ಲಿ ರಾಣೆಬೆನ್ನೂರು ತಾಲ್ಲೂಕಿನಲ್ಲಿ ಮಂಜೂರಾತಿ ನೀಡಿದ ಆಸ್ಪತ್ರೆ ಕಟ್ಟಡಗಳು, ವಸತಿ ಗೃಹಗಳು, ಆಸ್ಪತ್ರೆ ಕಟ್ಟಡಗಳಿಗಾಗಿ ವಿಸ್ತರಣೆಯ ಸಂಖ್ಯೆ ಎಷ್ಟು ?

(ಆ) ಮೇಲ್ಕಂಡ ಕಟ್ಟಡಗಳ ಕೆಲಸಗಳನ್ನು ಯಾವಾಗ ನಡೆಸಲಾಗುವುದು. ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

(ಅ)

ಆಸ್ಪತ್ರೆ ಕಟ್ಟಡಗಳು	...	ಇಲ್ಲ
ಎ.ಎನ್.ಎಂ. ಉಪಕೇಂದ್ರ	...	೩
ವೈದ್ಯಾಧಿಕಾರಿ ವಸತಿ ಗೃಹ	...	೬
೩ನೇ ದರ್ಜೆ ನೌಕರರ ವಸತಿ ಗೃಹ	...	೮
೪ನೇ ದರ್ಜೆ ನೌಕರರ ವಸತಿ ಗೃಹ	...	೬
ಮಹಿಳಾ ಆರೋಗ್ಯ ಸಂದರ್ಶಕಿಯರ ವಸತಿ ಗೃಹ	...	೨
ಪ್ರಾಥಮಿಕ ಆಸ್ಪತ್ರೆ ಕೇಂದ್ರ ಕಟ್ಟಡಗಳ ವಿಸ್ತರಣೆ	...	೨
		೨೭

(ಆ) ಈ ಎಲ್ಲಾ ಕೆಲಸಗಳನ್ನು ಪ್ರಸಕ್ತ ಸಾಲಿನಲ್ಲಿ ನಡೆಸಲಾಗುವುದು.

ಉಡುಪಿಯಲ್ಲಿರುವ ಆಸ್ಪತ್ರೆಗಳಿಗೆ ವೈದ್ಯಾಧಿಕಾರಿಗಳ ನೇಮಕಾತಿ

೫೦೯. ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಸಾರ್ವಜನಿಕ ಆಸ್ಪತ್ರೆ ಉಡುಪಿ ಇಲ್ಲಿಗೆ ೩ ವೈದ್ಯರನ್ನು ನೈನಾತಿ ಮಾಡಿದ್ದು, ಅವರು ಇಲ್ಲಿಯವರೆವಿಗೂ ಕೆಲಸಕ್ಕೆ ಹಾಜರಾಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸರ್ಕಾರ ಅವರ ಜಾಗದಲ್ಲಿ ಬೇರೆಯವರನ್ನು ಅತಿ ಜಾಗ್ರತೆಯಾಗಿ ನೈನಾತಿ ಮಾಡುವರೇ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮಂತ್ರಿ ಅಬ್ಕಾರಿ ಮಂತ್ರಿಗಳು).—

ಅ) ಹೌದು, ಮೂರು ವೈದ್ಯರ ಪೈಕಿ ಒಬ್ಬರು ಮಾತ್ರ ಕೆಲಸದ ಮೇಲೆ ಹಾಜರಾಗಿಲ್ಲ. ಮಿಕ್ಕ ಇಬ್ಬರು ವೈದ್ಯರುಗಳು ಕೆಲಸದ ಮೇಲೆ ಹಾಜರಾಗಿದ್ದಾರೆ.

ಆ) ಹೌದು.

ಪ್ರಾಥಮಿಕ ಆರೋಗ್ಯ ಘಟಕವನ್ನು ಪ್ರಥಮ ದರ್ಜೆಯ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವುದು:

೬೭೬. ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಹೊನ್ನಾಳಿ ತಾಲ್ಲೂಕು ಕೊಲಂಬಿ ಗ್ರಾಮದಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕವನ್ನು ಮೇಲ್ದರ್ಜೆಯ ಆಸ್ಪತ್ರೆಯನ್ನಾಗಿ ಪರಿವರ್ತಿಸಿಕೊಡಲು ಗ್ರಾಮಸ್ಥರ ಕೋರಿಕೆಯು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ವರ್ಷವಾದರೂ ಸದರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗುವುದೇ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು).—

ಅ) ಪ್ರಾಥಮಿಕ ಆರೋಗ್ಯ ಘಟಕವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸಲು ಮನವಿ ಬಂದಿದೆ.

ಆ) ಇದನ್ನು ಪರಿಶೀಲಿಸಲಾಗುವುದು.

ಪುಸ್ತಕಗಳ ಪ್ರಕಟಣೆ

೨೬೭. ಶ್ರೀ ಯು. ಭೂಪತಿ (ಸೊಡೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಬಾಟ್ಲಿಂಗ್ ಹಗರಣದ ಬಗ್ಗೆ ಉಚ್ಚನ್ಯಾಯಾಲಯದ ತೀರ್ಪಿನ ನಂತರ ಹಾಗೂ ಬೆಳಗಾವಿಯಲ್ಲಿ ನಡೆದ ಗಡಿ ವಿವಾದ ಮತ್ತು ಭಾಷಾ ಚಳುವಳಿಗೆ ಸಂಬಂಧಿಸಿದಂತೆ ಸರ್ಕಾರದವರು ಹಲವು ಪುಸ್ತಕಗಳನ್ನು ಹೊರ ತಂದಿರುವುದು ನಿಜವಲ್ಲವೇ ?

ಆ) ಈ ಪುಸ್ತಕಗಳಿಗಾಗಿ ಸರ್ಕಾರದವರು ಖರ್ಚು ಮಾಡಿದ ಹಣವೆಷ್ಟು ?

ಇ) ಸರ್ಕಾರಕ್ಕೆ ಪತ್ರಿಕೆಗಳ ಮುಖಾಂತರ ಸಾರ್ವಜನಿಕರಿಗೆ ತಿಳುವಳಿಕೆ ನೀಡಲು ಅವಕಾಶ ಇದ್ದಾಗ್ಯೂ ಈ ಪುಸ್ತಕಗಳನ್ನು ಮುದ್ರಿಸಲು ಕಾರಣಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧. ಬಾಟ್ಲಿಂಗ್ ಹಗರಣದ ಬಗ್ಗೆ ಸರ್ಕಾರವು ಪ್ರತ್ಯೇಕವಾಗಿ ಯಾವ ಪುಸ್ತಕವನ್ನೂ ಹೊರತಂದಿಲ್ಲ. ಆದರೆ ದಿನಾಂಕ ೧೨-೪-೧೯೮೬ ರಂದು ಕರ್ನಾಟಕದ ಬರಗಾಲದ ಪರಿಸ್ಥಿತಿಯನ್ನು ಪ್ರತ್ಯಕ್ಷ ಪರಿಶೀಲಿಸಲು ಪ್ರಧಾನಿಯವರು ಕರ್ನಾಟಕಕ್ಕೆ ಭೇಟಿ ನೀಡಿದಾಗ ಅವರು ಕೆಲವು ಸಭೆಗಳಲ್ಲಿ ಸರಾಯಿ ಬಾಟ್ಲಿಂಗ್ ಪ್ರಕರಣವನ್ನು ಪ್ರಸ್ತಾಪಿಸಿ ಮುಖ್ಯ ಮಂತ್ರಿಯಂಬರಿಗೆ ಅಧಿಕಾರದಲ್ಲಿರಲು ಹಕ್ಕಿಲ್ಲವೆಂದು ಹೇಳಿದರು ಈ ವಿಷಯ ಪ್ರಾಮುಖ್ಯವಾಗಿ ದೇಶದ ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾಗಿ ಗೊಂದಲದ ವಾತಾವರಣವನ್ನು ನಿರ್ಮಿಸಿತು. ಈ ಹಿನ್ನಲೆಯಲ್ಲಿ ಸತ್ಯಸ್ಥಿತಿಯನ್ನು ಎಲ್ಲರಿಗೂ ತಿಳಿಯಪಡಿಸುವುದಕ್ಕಾಗಿ ಮುಖ್ಯ ಮಂತ್ರಿಯವರು ಪ್ರಧಾನಿಯವರೊಂದಿಗೆ ಮಾಡಿದ ಪತ್ರ ವ್ಯವಹಾರಗಳು ಹಾಗೂ ಪತ್ರಿಕೆಗಳಲ್ಲಿ ಪ್ರಕಟವಾದ ಕೆಲವು ಅಗ್ರ ಲೇಖ ಹಾಗೂ ಲೇಖನಗಳನ್ನೊಳಗೊಂಡ ಪುಸ್ತಕವನ್ನು ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಕಟಿಸಲಾಯಿತು.

೨. ಕರ್ನಾಟಕ ಗಡಿಭಾಗಗಳಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸಲಾಗುತ್ತಿದೆ ಎಂಬ ನೆಪದ ಮೇರೆಗೆ ಸಂಯುಕ್ತ ಮಹಾರಾಷ್ಟ್ರ ಸೀಮಾ ಸಮಿತಿಯವರು ಬೆಳಗಾವಿ ಹಾಗೂ ಇದರ ಗಡಿ ಪ್ರದೇಶಗಳಲ್ಲಿ ಜೂನ್-೧ ರಿಂದ ಚಳುವಳಿಯನ್ನು ಆರಂಭಿಸಿದರು. ಇದರಿಂದಾಗಿ ಶ್ರೀ ಸಾಮಾನ್ಯರ ಆಸ್ತಿಪಾಸ್ತಿಗಳು ಹಾನಿಯಾದವು ಹಾಗೂ ಕೆಲವು ಪ್ರಾಣಹಾನಿ ಘಟನೆಗಳು ನಡೆದವು. ಇದೊಂದು ಅನಾವಶ್ಯಕ ಸತ್ಯಾಗ್ರಹವಾಗಿತ್ತೆಂದು ಎಲ್ಲರಿಗೂ ತಿಳಿಯಪಡಿಸುವುದಕ್ಕೋಸ್ಕರ ''ಮಹಾರಾಷ್ಟ್ರ ಇನ್ ಬೆಳಗಾಂ-ದಿ ನೀಡ್‌ಲೆಸ್ ಅಜಿಟೇಷನ್'' ಎಂಬ ಪುಸ್ತಕವನ್ನು ಆಂಗ್ಲ ಭಾಷೆಯಲ್ಲಿ ಪ್ರಕಟಿಸಲಾಯಿತ್ತು.

			ರೂ.
ಆ)	೧. ಪ್ರೈಮಿನಿಸ್ಟರ್ಸ್ ವಿಸಿಟ್ ಟು ಕರ್ನಾಟಕ ಅಂಡ್ ಆಫ್ಟರ್‌ಮತ್ (ಆಂಗ್ಲ)	—	೩, ೭೪, ೧೫೦-೦೦
	೨. ಪ್ರೈಮಿನಿಸ್ಟರ್ಸ್ ವಿಸಿಟ್‌ಟು ಕರ್ನಾಟಕ ಆಂಡ್ ಆಫ್ಟರ್‌ಮತ್ (ಕನ್ನಡ)	—	ಮುದ್ರಣದ ಬಿಲ್ಲು ಪರಿಶೀಲನೆಯಲ್ಲಿದೆ.
	೩. ಮಹಾರಾಷ್ಟ್ರ ಇನ್ ಬೆಳಗಾಂ—ದಿ ನೀಡ್‌ಲೆಸ್ ಅಜಿಟೇಷನ್	—	೧, ೯೨, ೪೬೬-೪೫